ರಾಗ : ಪೂರ್ವಿ                    ತಾಳ : ಆದಿತಾಳ

ರಚನೆ : ಶ್ರೀ ಭೋಗೇಶಾಚಾರ್ ನವಲಿ

ಧಾಟಿ : ತರಣಿ ಪ್ರಕಾಶ ಯತಿ ವರದೇಂದ್ರ ।ಗುರುರಾಯ ಗುರುರಾಯ ॥ ಎಂಬಂತೆ

ಎಂದಿನ ಪುಣ್ಯವೋ ಇಂದಿಗೆ ಫಲಿಸಿತು । ಧನ್ಯರೋ ನಾವು ಧನ್ಯರೋ ॥ ಪ ॥

ಇಂದ್ರತೀರ್ಥಾಂಕಿತ ಶ್ರೀಪಾದರೆಮ್ಮಯ ।
ಮಂದಿರಕೆ ದಯದಿಂದಲಿ ಬಂದರು ॥ ಬಂದರೋ ದಯದಿ ಬಂದರೋ ॥ ಅ.ಪ. ॥

ಕುಸುಮನಾಭನ ಹಸನದಿ ಪೂಜಿಪ ।
ಅಸಮತೇಜದ ಸುಶಮೀಂದ್ರತೀರ್ಥರು । ಬಂದರೋ ದಯದಿ ಬಂದರೋ ॥ ೧ ॥

ಅದ್ವೈತ ಮತಾಟವಿ ಕೃದ್ಧಾಲನಲರೆನಿಪ ।
ವಿದ್ವದ್ವರೇಣ್ಯಸುವಿದ್ಯೇಂದ್ರತೀರ್ಥರು । ಬಂದರೋ ದಯದಿ ಬಂದರೋ ॥ ೨ ॥

ಯೋಗೀಶರೆಮಳರು । ಭೋಗಾಪುರೇಶನ ।
ರಾಗದಿ ನೋಡಲು । ಬ್ಯಾಗದಿ ಬಂದರು । ಬಂದರೋ ದಯದಿ ಬಂದರೋ ॥ ೩ ॥

ಲೋಲಾಕ್ಷಿ ಸೀತಾ । ಮೂಲರಾಮರ ಪಾದ ।
ಕೀಲಾಲಜ ಕಾಳಿರಮಣಗೆ ತೋರಿಸಲು । ಬಂದರೋ ದಯದಿ ಬಂದರೋ ॥ ೪ ॥

ಕಲಿಮಲ ತಿಮಿರಕೆ । ನಳಿನಾಪ್ತ ಪ್ರಾಯರು ।
ಅಲವ ಬೋಧಮತ । ಜಲಧಿ ಚಂದಿರರು ।ಬಂದರೋ ದಯದಿ ಬಂದರೋ ॥ ೫ ॥

ಭುವಿಯೊಳ್ವಿಖ್ಯಾತ । ನವಲಿಯ ಗ್ರಾಮದ ।
ಅವನೀಸುರರೆಲ್ಲಾ । ಜವದಿ ನಮಿಪೆವು ॥ ಧನ್ಯರೋ ನಾವು ಧನ್ಯರೋ ॥ ೬ ॥

ಶ್ರೇಷ್ಠ ಮುಕುಂದನ । ಭೃತ್ಯ ಭೋಗೇಶನ ।
ಮುಟ್ಟಿ ಪೂಜಿಪನ ಭವ । ಕಷ್ಟವ ಕಳೆಯಲು । ಬಂದರೋ ದಯದಿ ಬಂದರೋ ॥ ೭ ॥

॥ ಶ್ರೀ ಗುರುಮಧ್ವೇಶಾರ್ಪಣಮಸ್ತು ॥